ವಾರ್ಮಿಂಗ್ ಅನ್ನು ತಡೆಗಟ್ಟಲು ವಿಶ್ವಸಂಸ್ಥೆ ನಿಯಮಿಸಿದ ನಿಯೋಗಗಳ ಚರ್ಚೆಯ ಕೋಣೆಯಲ್ಲಿ 'ಸ್ಮೋಕಿಂಗ್ ಝೋನ್' ಕೂಡ ಇತ್ತು ಎಂಬ ಸುದ್ದಿ ಕಾರ್ಟೂನಿಗರಿಗೆ ಸಂತಸ ಕೊಟ್ಟಿದೆಯಂತೆ. 'ಲಂಗ್ಸ್ ಆಫ್ ದ ವರ್ಲ್ಡ್' ಹೆಗ್ಗಳಿಕೆಯ ಅಮೆಝಾನ್ ಮಳೆ ಕಾಡುಗಳು ಹೊತ್ತಿ ಉರಿದು ಅಪಾರವಾದ ಹೊಗೆ ಬಿಡುಗಡೆ ಆದಾಗ ಅಮೆಝಾನ್ ಇ ಕಾಮರ್ಸ್ ತಾಣವು ಹೊಸ ಏರ್ ಕಂಡೀಷನರ್‌ಗಳನ್ನು ಬಿಡುಗಡೆ ಮಾಡಿತು ಎಂಬುದೂ ಕಾರ್ಟೂನಿಗರು ಸೃಷ್ಟಿ ಮಾಡಿದ ಗಾಳಿ ಸುದ್ದಿಯಂತೆ.

'ಹಿಂದೂಸ್ಥಾನ್ ಮೆ ಕ್ಯಾ ಚಲ್ತಾ ಹೈ?' ಹೊಗೆಯಿಂದ ಏನೂ ಕಾಣಿಸದಿರುವಾಗ ನೆರೆಕರೆಗೂ ಬೇರೇನೋ ನೆನಪಾಗಿ ಕಿರಿಕಿರಿಯಾಗುತ್ತದೆ. 'ಹಿಂದೂಸ್ಥಾನ್ ಮೆ ಫಾಗ್ ಚಲ್ತಾ ಹೈ' ಉತ್ತರದಿಂದ ಸಮಾಧಾನವಂತೂ ಆಗಿರಲಾರದು. ಕೊನೆಗೂ... ಹೊಗೆ ಭೂಮಿಯ ಆಕರ್ಷಣೆಗೆ ಮಣಿದಿದ್ದರೆ ಈ ಮೇಲೆ ಚರ್ಚಿಸಿದ ವಿಷಯಗಳಾವುದೂ ನಡೆಯುತ್ತಿರಲಿಲ್ಲ. ಏಕೆಂದರೆ, ಇಲ್ಲಿ ನಾವೂ ನೀವೂ ಇರುತ್ತಿರಲಿಲ್ಲ. ಹಾಗಂತ ಹೊಗೆಯನ್ನು ಕೆಳಕ್ಕೆ ನೂಕದೆ ರಾಕೆಟ್ಟು ಮೇಲೆ ಹೋಗಲಾರದು. ಐದು, ನಾಲ್ಕು, ಮೂರು, ಎರಡು, ಒಂದು... ಉಸಿರು ಬಿಗಿಹಿಡಿದು ಕುಳಿತವರಿಗೆಲ್ಲರಿಗೂ ಕಾಣುವುದು ಕಪ್ಪು ಹೊಗೆ ಮಾತ್ರ. ಈ ಹೊಗೆಯೆಲ್ಲ ಯಶಸ್ವಿಯಾಗಿ ಭೌಮವೋ ವ್ಯೋಮವೋ ಸೇರಿದ ಮೇಲೆ ಉಪಗ್ರಹ ಯಶಸ್ವಿಯಾಗಿ ಕಕ್ಷೆಗೆ ಸೇರಿದೆ ಎಂಬ ಸುದ್ದಿ ತಿಳಿಯುತ್ತಿತ್ತು. ಲಾಕ್‌ಡೌನ್ ಸಮಯದಲ್ಲಿ ದೂರದ ಹಿಮಾಲಯದ ಜಲಪಾತ ಪಂಜಾಬ್ ಹರಿಯಾಣಕ್ಕೆ ಕಾಣುತ್ತಿದ್ದರೆ, ಈ ಕಾರ್ಬನ್ ಹೊಗೆ ಹೇಗೆ ಮಾಯೆಯಂತೆ ನಮ್ಮನ್ನು ಆವರಿಸಿಕೊಂಡಿದೆ ಎಂದಷ್ಟೇ ಅಲ್ಲ, ಕಬ್ಬನ್ ಪಾರ್ಕಿಗೆ ವಾಯು ವಿಹಾರಕ್ಕೆಂದು ಹೋದರೂ ಈ ಕಾರ್ಬನ್ ಸ್ಮೋಕನ್ನೇ ಸೇವಿಸಿ ಬರಬೇಕು ಎಂಬ ಮಾಹಿತಿಯನ್ನು ಪರೋಕ್ಷವಾಗಿ ನೀಡಿದೆ.

ಇರಲಿ, ಧೂಮದ ಬಗ್ಗೆ ಹೀಗೆ ಎಷ್ಟು ಬೇಕಾದರೂ ಹೊಗೆ ಹಾರಿಸಿ ರೈಲು ಬಿಡಬಹುದಲ್ಲವೇ? ಧೂಮದೊಂದಿಗೆ ಸಾಗಿದ ಈ ಯಾನದಿಂದ ಓದುಗರ ಆರೋಗ್ಯಕ್ಕೆ ಯಾವ ಇಂಜುರಿಯೂ ಆಗಲಾರದು ಎಂಬ ಭರವಸೆಯೊಂದಿಗೆ ಇದಕ್ಕೊಂದು ಮುಕ್ತಾಯವನ್ನು ಒದರಿ ನಿಲ್ಲಿಸುತ್ತೇನೆ.

**ಹೊಗೆಯ ನೋಡುತ್ತಾ ಪಿಟೀಲು ನುಡಿಸಿದವನು**
**ಚರಿತೆಯಲಿ ಅಮರನಾಗಿ ಉಳಿದುಹೋದನು।**
**ಪೊಗೆಯ ಮುಂದೆ ಪಿಟೀಲು ಕೋಣನ ಮುಂದೆ ಕಿನ್ನರಿ**
**ತಿಳಿದುಕೋ, ಇಲ್ಲಿ ಯಾವುದೂ ವ್ಯರ್ಥವಲ್ಲ ಎಂದನಿವನು॥**

(ಕವನದ ಬಗೆಗಿನ ಗಂಡನ ಅಸಮಾಧಾನದ ಹೊಗೆಗೆ, 'ಬಾಯ್ಮುಚ್ಚಿ ಓದುವುದಾದರೆ ಓದಿ...' ಎಂಬ ಬಿರುಸಾದ ಉತ್ತರವನ್ನು ಮೊದಲೇ ಬೀಸಿ ಒಗೆದ ಕಾರಣ 'ಪುನಃ ಕವನವೇ?' ಎಂಬ ಪ್ರಶ್ನೆ ಬರಲಿಲ್ಲ)

**ರೇಶ್ಮಾ ಭಟ್**

ಹುಟ್ಟೂರು ಕೊಡಗಿನ ವಿರಾಜಪೇಟೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ನಿವಾಸಿ. ವೃತ್ತಿಯಲ್ಲಿ ಉಪನ್ಯಾಸಕಿ. 'ನವೆ ನವೋನ್ಮೇಷಶಾಲಿನೀ' ಎಂಬ ಲಲಿತ ಪ್ರಬಂಧ ಸಂಕಲನ ಹಾಗೂ 'ಕಥಾ ವ್ಯವಕಲನ' ಎನ್ನುವ ಕಥಾಸಂಕಲನ ಪ್ರಕಟವಾಗಿದೆ. ಕತೆ, ಲಲಿತ ಪ್ರಬಂಧ, ಲೇಖನ, ಕವನ, ಹನಿಗತೆಗಳು, ಹನಿಗವನಗಳು ನಾಡಿನ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಗಮಕಿ ಹಾಗೂ ಆಕಾಶವಾಣಿ ಕಲಾವಿದೆ.